ಮೂ. ದಾ. ನಂ. 93/2023

ಪಿ.ಡಬ್ಲ್ಯು 1

(ಇಂದು ದಿನಾಂಕ 06-07-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಜೆ.ಎನ್. ವಕೀಲರಿಂದಃ**

ನಾನು 2012 ರಿಂದ Charted accountant ಉದ್ಯೋಗ ಮಾಡುತ್ತಿದ್ದೇನೆ. ನನಗೆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಜ್ಞಾನ ಇರುತ್ತದೆ ಎಂದರೆ ಸರಿ. ಬಂಗಾರದ ವ್ಯಾಪಾರ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಂದ ಪರವಾನಿಗೆ ಬೇಕಾಗುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಪ್ರಸ್ತುತ ದಾವೆಯಲ್ಲಿ ನಾನು ವೈಯಕ್ತಿಕವಾಗಿ ಬಂಗಾರ ನೀಡಿರುವುದಾಗಿ ನುಡಿಯುತ್ತಾರೆ. ನನ್ನ ಬಳಿ ಎಷ್ಟು ಮೊತ್ತದ ಬಂಗಾರ ಇತ್ತು ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಒದಗಿಸಿದ್ದೀರಾ ಎಂದರೆ ನನ್ನ ಬಳಿ ದಾಖಲೆಗಳು ಹಾಗೂ ಛಾಯಾಚಿತ್ರಗಳು ಇರುವುದಾಗಿ ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯು ಮರು ಉತ್ತರದಲ್ಲಿ ಬಂಗಾರವನ್ನು ಪಡೆದುಕೊಂಡಿರುವುದಾಗಿಯೂ ಹೇಳಿರುತ್ತಾರೆ. ನಾನು ಬಂಗಾರವನ್ನು ಹಣದ ಅವಶ್ಯಕತೆ ಇರುವುದರಿಂದ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. ನಾನು ಹಣದ ಅವಶ್ಯಕತೆ ಇರುವುದರಿಂದ ಬಂಗಾರವನ್ನು ಮಾರಾಟ ಮಾಡಿರುವ ಬಗ್ಗೆ ವಾದ ಪತ್ರದಲ್ಲಿ ಬರೆದಿರುವುದಿಲ್ಲ. ಮುಂಬೈ ಹಾಗೂ ಕುಮಟಾದಲ್ಲಿ ಬಂಗಾರದ ಬೆಲೆ ಒಂದೇ ಆಗಿರುತ್ತದೆ ಎಂದರೆ ಸರಿ. ನನಗೆ 2018 ರಿಂದ ಪ್ರತಿವಾದಿಯ ಪರಿಚಯ ಇರುತ್ತದೆ. ನಾನು ಪ್ರತಿವಾದಿಯ ಜೊತೆ ಬಂಗಾರದ ವ್ಯವಹಾರವನ್ನು ಮಾಡಿರುವುದರಿಂದ ಅವರ ಪರಿಚಯ ಇರುತ್ತದೆ. ಬಂಗಾರವನ್ನು ಪ್ರತಿವಾದಿಗೆ ಮಾರಾಟ ಮಾಡುವ ಕಾಲಕ್ಕೆ ಅವರಿಂದ ರಶೀದಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು 3 ರಶೀದಿಗಳು ಪ್ರತಿವಾದಿಯ ಬಳಿ ಇದ್ದು, ನಾನು ಮಾರಾಟ ಮಾಡಿದ ಬಂಗಾರ ಕರಗಿಸಿದ ನಂತರ ಸಿಗುವ ಬಂಗಾರಕ್ಕೆ ರಶೀದಿ ನೀಡುವುದಾಗಿ ಪ್ರತಿವಾದಿಯು ತಿಳಿಸಿರುವುದಾಗಿ ನುಡಿಯುತ್ತಾರೆ. ನಿ.ಪಿ. 1 ರಲ್ಲಿ ಪ್ರತಿವಾದಿಯ ಹೆಸರು

ನಮೂದು ಇಲ್ಲ ಎಂದರೆ ಸರಿ. ನಿ.ಪಿ. 1 ರಲ್ಲಿ ಜಿ ಎಸ್ ಟಿ ಸಂಖ್ಯೆ ಇರುವುದಿಲ್ಲ ಎಂದರೆ ಸರಿ. ನಿ.ಪಿ. 1 ರಲ್ಲಿ ತಾರೀಖು ನಮೂದು ಇಲ್ಲ ಎಂದರೆ ಸರಿ. ನಿ.ಪಿ. 1 ರಲ್ಲಿ ಬಂಗಾರದ ತೂಕ ಹಾಗೂ ಮಾದರಿಯನ್ನು ನಮೂದು ಮಾಡಿದ್ದು ಇರುವುದಿಲ್ಲ ಎಂದರೆ ಸರಿ. ನಿ.ಪಿ. 1 ರಲ್ಲಿ ಬರೆದಿರುವ ಹಸ್ತಾಕ್ಷರಗಳಿಗೆ ವ್ಯತ್ಯಾಸಗಳು ಕಂಡುಬರುತ್ತವೆ ಎಂದರೆ ಸಾಕ್ಷಿಯು ನಿ.ಪಿ. 1 ರಲ್ಲಿ ವಾದಿ ಹಾಗೂ ಪ್ರತಿವಾದಿ ಇಬ್ಬರ ಬರವಣಿಗೆ ಇರುವುದಾಗಿ ನುಡಿಯುತ್ತಾರೆ. ನಿ.ಪಿ. 1 ರಲ್ಲಿ ಎಷ್ಟು ಮೊತ್ತದ ಬಂಗಾರವನ್ನು ನೀಡಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿ.ಪಿ. 2 ರ ಮೊದಲನೇ ಪುಟದಲ್ಲಿ ತಾರೀಖು, ಪ್ರತಿವಾದಿಯ ಹೆಸರು, ಸಹಿ ಹಾಗೂ ವ್ಯವಹಾರಕ್ಕೆ ಸಂಬಂಧಪಟ್ಟಂತೆ ವಿವರಣೆ ನಮೂದು ಮಾಡಿದ್ದು ಇರುವುದಿಲ್ಲ ಎಂದರೆ ಸಾಕ್ಷಿಯು ನಿ.ಪಿ. 2 ರ ಹಿಂಬದಿ ಪುಟದಲ್ಲಿ ನಮೂದು ಇರುವುದಾಗಿ ನುಡಿಯುತ್ತಾರೆ. ನಿ.ಪಿ. 2 ರ ಮುಖ ಪುಟದಲ್ಲಿ ಬರವಣಿಗೆ ಮಾಡಲು ಜಾಗ ಇತ್ತು ಎಂದರೆ ಸಾಕ್ಷಿಯು ಸ್ವಲ್ಪ ಜಾಗ ಮಾತ್ರ ಇರುವುದಾಗಿ ನುಡಿಯುತ್ತಾರೆ. ನಿ.ಪಿ. 2 ರ ಮುಖ ಪುಟದಲ್ಲಿ ಅರ್ಧ ಪುಟದಷ್ಟು ಜಾಗ ಖಾಲಿ ಇತ್ತು ಎಂದರೆ ಸರಿಯಲ್ಲ. ನಿ.ಪಿ. 2 ರಲ್ಲಿ ಮೊದಲೇ ಪುಟದಲ್ಲಿ ಬರೆದ ಬರವಣಿಗೆಗೂ ಈ ದಾವೆಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ನಿ.ಪಿ. 2 ರ 2 ನೇ ಪುಟದಲ್ಲಿ ಪ್ರತಿವಾದಿಯ ಸಹಿ ಇರುತ್ತದೆ. ನಿ.ಪಿ. 2 ರ 2 ನೇ ಪುಟ ಅಧಿಕೃತ ದಾಖಲೆ ಅಲ್ಲ ಎಂದರೆ ಸರಿಯಲ್ಲ.

ನಿ.ಪಿ. 1 ಮತ್ತು 2 ರಲ್ಲಿ ವಾದಿ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ. 1 ರಲ್ಲಿ ನಂ. 4 ಪ್ಯಾಕೆಟ್ ನ್ನು not given ಎಂದು ನಾನು ಬರೆದಿರುವುದಾಗಿ ನುಡಿಯುತ್ತಾರೆ. ನಿ.ಪಿ. 1 ರ 2 ನೇ ಪುಟದಲ್ಲಿ ಬರೆದಿರುವ ಬರವಣಿಗೆ ನನ್ನ ವ್ಯವಹಾರಕ್ಕೆ ಸಂಬಂಧಪಟ್ಟದ್ದು ಅಲ್ಲ. ನಿ.ಪಿ. 1 ರ 2 ನೇ ಪುಟದಲ್ಲಿ ಹಾಕಿರುವ ಸಹಿ ಯಾರದು ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ಸಹಿಯನ್ನು ಗುರುತು ಹಿಡಿಯಲು ನನಗೆ ಈಗ ಆಗುವುದಿಲ್ಲ. ನಿ.ಪಿ. 1 ಮತ್ತು 2 Estimated ಬಿಲ್ ಎಂದರೆ ಸರಿ. ನನ್ನ ಮತ್ತು ಪ್ರತಿವಾದಿಯ ನಡುವೆ ಆದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾವುದೇ ಕರಾರು ಮಾಡಿಕೊಂಡಿದ್ದು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯ ಜೊತೆ 2018 ರಿಂದ ವ್ಯವಹಾರ ಮಾಡುತ್ತಾ

ಬಂದಿರುವುದರಿಂದ ಭರವಸೆಯ ಮೇರೆಗೆ ವ್ಯವಹಾರ ಮಾಡಿರುವುದಾಗಿ ನುಡಿಯುತ್ತಾರೆ. ನಾನು ಪ್ರತಿವಾದಿಗೆ ಎಷ್ಟು ತೂಕದ ಬಂಗಾರ ಹಾಗೂ ಯಾವ ಮಾದರಿಯ ಬಂಗಾರವನ್ನು ನೀಡಿರುವ ಬಗ್ಗೆ ನಿ.ಪಿ. 3 ಹಾಗೂ ವಾದ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಬಂಗಾರವನ್ನು ಮಾರಾಟ ಮಾಡಲು ಮುಂಬೈನಲ್ಲಿ ಸಾಕಷ್ಟು ಅವಕಾಶ ಇತ್ತು ಎಂದರೆ ಸರಿ. ನಾನು ಪ್ರತಿವಾದಿಗೆ ಬಂಗಾರವನ್ನು ನೀಡುವ ಸಮಯದಲ್ಲಿ ವಾದಿಯ ಹೆಂಡತಿ ಹಾಗೂ ಪ್ರತಿವಾದಿಯ ತಮ್ಮ ಹಾಜರಿದ್ದರು.

ನಾನು ಪ್ರತಿವಾದಿಗೆ ಬಂಗಾರವನ್ನು ಮಾರಾಟ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಮಾರಾಟ ಮಾಡಿದ ಬಂಗಾರದ ಮೊತ್ತವನ್ನು ಪ್ರತಿವಾದಿಯು ನನಗೆ ಚುಕ್ತಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ಯಾವುದೇ ಹಣವನ್ನು ನೀಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು 18-09-2022 ರಂದು 3 ಲಕ್ಷ ನಗದನ್ನು ನೀಡಿದ್ದು ಇರುವುದಿಲ್ಲ. ಬಂಗಾರವನ್ನು ಕ್ರೆಡಿಟ್ ಬೇಸಿಸ್ (ಉದ್ರಿ) ಮೇಲೆ ಮಾರಾಟ ಮಾಡುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯಿಂದ ಬಾಕಿ ಹಣವನ್ನು ಕೇಳುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯಿಂದ ಇಂದಿನ  ಬಂಗಾರದ ಮೊತ್ತವನ್ನು ಕೇಳಿದ್ದು ಇರುವುದಿಲ್ಲ. ಬದಲಾಗಿ ವ್ಯವಹಾರ ನಡೆದ ಸಂದರ್ಭದಲ್ಲಿ ಬಂಗಾರಕ್ಕಿದ್ದ ಮೊತ್ತವನ್ನು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನಿ.ಪಿ. 1 ಮತ್ತು 2 ನ್ನು ಸೃಷ್ಟಿ ಮಾಡಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಿ.ಪಿ. 1 ಮತ್ತು 2 ರಂತೆ ಯಾವುದೇ ಹಣವನ್ನು ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ